<u>ದಿನಾಂಕ **13.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲು ಃ ಪ್ರತಿವಾದಿ ಪರ ವಕೀಲರಿಂದ</u>

ನಾನು ಪದವೀದರನಾಗಿದ್ದೇನೆ. ಹಾಸನ ಜಿಲ್ಲೆಯ 6 ತಾಲ್ಲೂಕಿನ ಗ್ರಾಮ ಪಂಚಾಯಿತಿಯ ಮೇಲೆ ಕೇಸು ದಾಖಲು ಮಾಡಿದ್ದೇನೆ. ಚನ್ನರಾಯಪಟ್ಟಣದಲ್ಲಿ ಸುಮಾರು 15 ರಿಂದ 18 ಕೇಸುಗಳನ್ನು ಗ್ರಾಮ ಪಂಚಾಯಿತಿ ವಿರುದ್ದ ದಾಖಲು ಮಾಡಿದ್ದೇನೆ. ಸಾಮಾನ್ಯವಾಗಿ ಸರ್ಕಾರದ ಪ್ರತಿನಿಧಿ ಟೆಂಡರ್ ಮಾಡಬೇಕಾಗುತ್ತದೆ ಎಂದರೆ ಸರಿ ಆದರೆ ಟೆಂಡರ್ ಮಾಡಿರುವುದಿಲ್ಲ. ಕಾರಣ 5 ಲಕ್ಷ ಒಳಗೆ ಇದ್ದ ಕಾರಣ ಟೆಂಡರ್ ಮಾಡಿರುವುದಿಲ್ಲ. 5 ಲಕ್ಷಗಿಂತ ಒಳಗೆ ಇದ್ದರೆ ಟೆಂಡರ್ ಮಾಡಲೇ ಬೇಕು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮೇಟಿರಿಯಲ್ ಬೇಕಾದರೆ ಇಟೆಂಡ್ ಕೇಳುತ್ತಾರೆ ಎಂದರೆ ಸರಿ. ನಂತರ ಅಂಗಡಿಯವರು ಸರ್ಕಾರಕ್ಕೆ ಕೊಟೆಷನ್ ಕೊಡುತ್ತಾರೆ ಎಂದರೆ ಸರಿ. ಅದರಲ್ಲಿ ಇಂತಿಷ್ಟು ಬೆಲೆ ಎಂದು ನಿಗದಿ ಮಾಡಿರುತ್ತಾರೆ ಎಂದರೆ ಸರಿ. ನಂತರ ಕೋಟೆಷನ್ ಪಡೆದು comparative statement ಮಾಡುತ್ತಾರೆ ಎಂದರೆ ಸರಿ. ಅದರಲ್ಲಿ ಕಡಿಮೆ ಬೆಲೆಗೆ ಯಾರು ಕೊಡುತ್ತಾರೋ ಅದನ್ನು ಸೆಲೆಕ್ಟ್ ಮಾಡುತ್ತಾರೆ ಎಂದರೆ ಸರಿ. ಅಂಗಡಿಗಳಿಗೆ ಸರಬರಾಜನ್ನು ಮೊಹರು ಮತ್ತು ಸಹಿ ಹಾಕಿ ಕೊಡಲಾಗುತ್ತದೆ ಎಂದರೆ ಸರಿ. ಪಿಡಿಒ ಸರ್ಕಾರದ ಪ್ರತಿನಿಧಿ ಎಂದರೆ ಸರಿ. ಗ್ರಾಮಪಂಚಾಯಿತಿಯಲ್ಲಿ ವ್ಯವಹಾರ ಟೆಂಡರ್ ಮೂಲಕ ಮಾಡಿರುವುದಿಲ್ಲ ಆದರೆ ಸರಬರಾಜುವಿನ ಆದೇಶದ ಮೇಲೆ ಆಗಿರುತ್ತದೆ. ಪ್ರತಿವಾದಿಗಳು ಇಡೆಂಟನ್ನು ನಮಗೆ ಕೊಟ್ಟಿರುತ್ತಾರೆಯೇ ಎಂದರೆ ಕೊಟ್ಟಿರುತ್ತಾರೆ. ನಾವು ಪ್ರತಿವಾದಿಗಳಿಗೆ ಕೋಟೇಷನನ್ನು ನೀಡಿರುತ್ತೇವೆ. ಎದುರುದಾರರ ಜೊತೆ ಅಗ್ರಿಮೆಂಟನ್ನು ಮಾಡಿಕೊಂಡಿರುವುದಿಲ್ಲ. ನಿಪಿ 5 ರಲ್ಲಿ ದಿನಾಂಕ ತಿಂಗಳು ವರ್ಷ ನಮೂದು ಆಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ದಾಖಲಾತಿ ತೋರಿಸಿ ಕೇಳಿದಾಗ ಅದರಲ್ಲಿ ಇಲ್ಲ ಎಂದು ಹೇಳುತ್ತಾರೆ. ಅಧ್ಯಕ್ಷರು ಗ್ರಾಮಪಂಚಾಯಿತಿ ಕೆಂಬಾಳು ಅದರಲ್ಲಿ ಸೀಲು ಮತ್ತು ಸಹಿ ಇರುವುದಿಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರೆದು ಅಲ್ಲೆ ಪಕ್ಕದಲ್ಲಿ ಇರುತ್ತದೆ ಎಂದು ಹೇಳುತ್ತಾರೆ. ಅದರಲ್ಲಿ ಗ್ರಾಮಪಂಚಾಯಿತಿ ಕಾರ್ಯಾಲಯ ಎಂದು ನಮೂದು ಇರುತ್ತದೆ ಎಂದರೆ ಸರಿ. ಆ ಸೀಲನ್ನು ನಾವು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಆ ಸೀಲು ಮತ್ತು ಸಹಿ ಗ್ರಾಮ ಪಂಚಾಯಿತಿಯವರಿಗೆ ಸೇರಿದ್ದು ಅಲ್ಲ ಎಂದರೆ ಸರಿಯಲ್ಲ. ಪಿಡಿಒ ರವರ ಸೀಲು ಮತ್ತು ಸಹಿ ಇಲ್ಲ ಎಂದರೆ ಸರಿ ಆದರೆ ಕಾರ್ಯಾಲಯದ ಮೊಹರು ಇರುತ್ತದೆ ಎಂದು ನುಡಿಯುತ್ತಾರೆ. ಗ್ರಾಮ ಪಂಚಾಯಿತಿನಲ್ಲಿ ಯಾವುದೇ ವ್ಯವಹಾರ ಆಗಬೇಕಾದರೆ ಪಿಡಿಒ ಮತ್ತು ಅಧ್ಯಕ್ಷರ ಸಹಿ ಮತ್ತು ಸೀಲು ಬೇಕಾಗುತ್ತದೆ ಎಂದರೆ ಸರಿ. ಪ್ರತಿವಾದಿ ಎಷ್ಟು ವರ್ಷದಿಂದ ಪರಿಚಯ ಎಂದರೆ ನನಗೆ ಪರಿಚಯ ಇಲ್ಲ ನನಗೆ ಇಟೆಂಡ್ ಕೊಟ್ಟಿರುತ್ತಾರೆ ಅಷ್ಟೇ ಎಂದು ನುಡಿಯುತ್ತಾರೆ. 2022 ರಲ್ಲಿ ಪ್ರತಿವಾದಿಯ ಪಿಡಿಒ ಮತ್ತು ಅಧ್ಯಕ್ಷರ ಹೆಸರು ನನಗೆ ಗೊತ್ತಿಲ್ಲ. ನಿಪಿ 5 ಅನ್ನು 2022 ರಲ್ಲಿ ಏಪ್ರಿಲ್ ತಿಂಗಳಲ್ಲಿ ಕೊಡಲಾಗಿರುತ್ತದೆ ಯಾರ ಅಧ್ಯಕ್ಷರ ಪಿರಿಯಂಡ್ ಎಂದು ಗೊತ್ತಿಲ್ಲ. ಈ ಕೇಸಿನಲ್ಲಿ ಪಂಚಾಯಿತಿ ಅಧ್ಯಕ್ಷರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಮೇಲಾಧಿಕಾರಿಯವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಪಂಚಾಯಿತಿಗೆ ಕೋಟೆಷನ್ ಕೊಟ್ಟಿರುತ್ತೇನೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಯಾವುದೇ ರೀತಿಯ ಕೊಟೇಷನ್ ಕೊಡದಿದ್ದರು ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆಸ ರಿಯಿಲ್ಲ. ಕೊಟೇಷನ್ ಕೊಟ್ಟಿದ್ದೆ ಆದಲ್ಲಿ ಅದರ ಬಗ್ಗೆ ದಾಖಲಾತಿ ಹಾಜರು ಪಡಿಸುತ್ತಿದ್ದೆ ಎಂದರೆ ಸಾಕ್ಷಿಯು

ಅಗತ್ಯ ಇದ್ದಲ್ಲಿ ಹಾಜರು ಪಡಿಸುತ್ತೇನೆ ಎಂದು ಹೇಳುತ್ತಾರೆ. ನಿಪಿ 5 ಅನ್ನು ಸೃಷ್ಟಿ ಮಾಡಿಕೊಂಡು ಪಂಚಾಯಿತಿಯವರು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ 6 ರಲ್ಲಿ ಗ್ರಾಮ ಪಂಚಾಯಿತಿಯವರ ಸಹಿ ಮತ್ತು ಮೊಹರು ಇರುವುದಿಲ್ಲ ಎಂದರೆ ಸರಿ ಆದರೆ ಪಕ್ಕದಲ್ಲಿ ಇದೆ ಎಂದು ನುಡಿಯುತ್ತಾರೆ. ಗ್ರಾಮ ಪಂಚಾಯಿತಿ ಕಾರ್ಯಾಲಯ ಎಂದು ನಮೂದು ಇರುತ್ತದೆ ಎಂದು ಹೇಳುತ್ತಾರೆ. ಗ್ರಾಮ ಪಂಚಾಯಿತಿ ಅಧ್ಯಕ್ಷರ ಸಹಿ ಮತ್ತು ಸೀಲು ಇರುವುದಿಲ್ಲ ಎಂದರೆ ಸರಿ . ನಿಪಿ 6 ರಲ್ಲಿ ಪಿಡಿಒ ರವರ ಸಹಿ ಮತ್ತು ಸೀಲು ಇರುವುದಿಲ್ಲ ಎಂದರೆ ಸರಿ ಕಾರ್ಯಾಲಯದ ಸೀಲು ಇದೆ ಎಂದು ನುಡಿಯುತ್ತಾರೆ. ಗ್ರಾಮ ಪಂಚಾಯಿತಿ ಕಾರ್ಯಾಲಯದ ಮೊಹರು ಇರುತ್ತದೆ ಎಂದು ಹೇಳುತ್ತಾರೆ ಅದರಲ್ಲಿ ಪಡಿಒ ಅವರ ಸಹಿ ಇರುತ್ತದೆ ಯಾರು ಪಿಡಿಒ ಎಂದು ಗೊತ್ತಿಲ್ಲ. ಗ್ರಾಮ ಪಂಚಾಯಿತಿಗೆ ಮೆಟಿರಿಯಲ್ಸ್ ಅನ್ನು ನಾವೇ ನೇರವಾಗಿ ಕೊಟ್ಟಿರುತ್ತೇವೆ. ನಿಪಿ 6 ಅನ್ನು ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 6 ನಿಜವಾದ ದಾಖಲಾತಿ ಆಗಿದ್ದೆ ಆದಲ್ಲಿ ಗ್ರಾಮಪಂಚಾಯಿತಿ ಅಧ್ಯಕ್ಷರ ಮತ್ತು ಪಿಡಿಒ ರವರ ಸಹಿ ಮತ್ತು ಮೊಹರು ಇರುತ್ತಿತ್ತು ಎಂದರೆ ಸರಿಯಲ್ಲ. ಮೆಟಿರಿಯಲ್ ಬೇಕು ಎಂದು ಯಾರು ಕೇಳಿದರು ಎಂದು ಇಒ ಮತ್ತು ಸಿಇಒ ಮತ್ತು ಗ್ರಾಮ ಪಂಚಾಯಿತಿ ಪಿಡಿಎ ಸೇರಿ ಸರಬರಾಜು ಆದೇಶವನ್ನು ಕೊಟ್ಟಿರುತ್ತೇವೆ. ಆ ಮೂರು ಜನರು ಕೊಟ್ಟ ಸರಬರಾಜು ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಅಂಚೆಯ ಮೂಲಕ 2023 ರಲ್ಲಿ ಕೇಳಿರುತ್ತೇವೆ. ಕೆಂಬಾಳು ಸತೀಶ ಎನ್ನುವವರು ಇರಬಹುದು . ಕೆಂಬಾಳು ಪಂಚಾಯಿತಿಯಲ್ಲಿ 2022 ರಿಂದ ಇಲ್ಲಿಯವರೆಗೂ ಒಬ್ಬರೇ ಪಿಡಿಒ ಇದ್ದಾರೆ ಬದಲಾವಣೆ ಆಗಿರುವುದಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಪಿಡಿಒ ರವರಿಗೆ ನೊಟಿಸ್ ನೀಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 9 ರಲ್ಲಿ ಪಿಡಿಒ ರವರ ಸೀಲು ಮತ್ತು ಸಹಿ ಇರುವುದಿಲ್ಲ ಎಂದರೆ ಸರಿ . ಪಿಡಿಒಗಾಗಲಿ ಅಧ್ಯಕ್ಷರಿಗಾಗಲಿ ಯಾವುದೇ ನೋಟಿಸ್ ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಯಾವುದೇ ರೀತಿಯ ಮೆಟಿರಿಯಲ್ಸ್ ಅನ್ನು ನಮ್ಮಿಂದ ಪಡೆಯದೇ ಇದ್ದ ಕಾರಣ ಯಾವುದೇ ರೀತಿಯ ಹಣ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ನಿಪಿ 1 ರಿಂದ 9 ರ ದಾಖಲಾತಿಗಳು ಈ ಕೇಸಿಗಾಗಿ ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ. ಪ್ರತಿವಾದಿಯು ನಾವು ಹೇಳುವಂತೆ ಹಣ ಕೊಡಲು ಬಾದ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ಅಂದಾಜು ಹಾಸನ ಜಿಲ್ಲೆಯಲ್ಲಿ 60 ರಿಂದ 65 ಗ್ರಾಮಪಂಚಾಯಿತಿ ವಿರುದ್ಧ ಕೇಸು ಹಾಕಿರುತ್ತೇವೆ 106 ಕೇಸನ್ನು ಹಾಕಿರುತ್ತೇವೆ ಎಂದರೆ ಸರಿ .

<u>ಮರು ವಿಚಾರಣೆ ಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.